I/701089/2024

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ,
4ನೇ ಮಹಡಿ, ಅರಣ್ಯ ಭವನ, 18ನೇ ಅಡ್ಡರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560003
ದೂರವಾಣಿ: 080-23347008

Office of the
Principal Chief Conservator of Forests
(Head of Forest Force)
4th Floor, Aranya Bhavan, 18th Cross,
Malleshwaram, Bengaluru – 560 003
Email: apccfworkingplan@gmail.com

ಸಂಖ್ಯೆ: KFD/WP/RFO(GIS)/1/2018 ದಿನಾಂಕ:07-11-2024

ಅತೀ ಜರೂರು

## ಸುತ್ತೋಲೆ

ವಿಷಯ: ಜಿಯೋರೆಫರೆನ್ಸ್ಡ್ ಮತ್ತು ಗಣಕೀಕೃತ (Geo- referenced and Digitised) ಅರಣ್ಯ ಗಡಿಗಳನ್ನು ಕ್ಷೇತ್ರದಲ್ಲಿ ಪರಿಶೀಲಿಸುವ (Ground Verification) ಕಾರ್ಯ ನಿರ್ವಹಿಸುವ ಬಗ್ಗೆ.

ಕರ್ನಾಟಕ ಅರಣ್ಯ ಇಲಾಖೆಯು ದೂರ ಸಂವೇದಿ ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ (Remote Sensing and GIS) ತಂತ್ರಜ್ಞಾನವನ್ನು ಬಳಸಿಕೊಂಡು ರಾಜ್ಯದ ಎಲ್ಲಾ ಅಧಿಸೂಚಿತ ಅರಣ್ಯ ಪ್ರದೇಶಗಳ ಭೌಗೋಳಿಕ ಮಾಹಿತಿಯನ್ನು ಕಂದಾಯ ಗ್ರಾಮ ನಕಾಶೆಗಳ ಮಾಪನಕ್ಕನುಗುಣವಾಗಿ ಸಿದ್ಧಪಡಿಸಿರುತ್ತದೆ. ಸದರಿ ಕಾರ್ಯವನ್ನು ಪ್ರಾದೇಶಿಕ ದೂರ ಸಂವೇದಿ ಕೇಂದ್ರ, ದಕ್ಷಿಣ (RRSC South) ರವರ ಪ್ರಮಾಣಿತ ಕಾರ್ಯ ವಿಧಾನ (SOP) ಹಾಗೂ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ರವರ ಸಹಯೋಗದೊಂದಿಗೆ ಕೈಗೊಳ್ಳಲಾಗಿರುತ್ತದೆ. ತಂತ್ರಜ್ಞಾನ ಆಧಾರಿತವಾಗಿ ಕೆಡಸ್ಟ್ರಲ್ (ಕಂದಾಯ ಗ್ರಾಮ) ಮಟ್ಟದಲ್ಲಿ ಅಧಿಸೂಚಿತ ಅರಣ್ಯಗಳ ಗಡಿಗಳನ್ನು ಜಿಯೋರೆಫರೆನ್ಸ್ ಮತ್ತು ಗಣಕೀಕೃತ (Geo- reference and digitise) ಮಾಡಲಾಗಿರುತ್ತದೆ.

ಮುಂದುವರೆದು, ವಿಭಾಗವಾರು ಅಧಿಸೂಚಿತ ಅರಣ್ಯ ಪ್ರದೇಶಗಳ ಸರ್ವೆ ನಂಬರುವಾರು ವಿವರಗಳನ್ನು ಪರಿಶೀಲಿಸಿ, ಕ್ರೋಢೀಕರಿಸುವ ಕಾರ್ಯವನ್ನು ಈಗಾಗಲೇ ಏಪ್ರಿಲ್ ಮತ್ತು ಮೇ-2024 ರಲ್ಲಿ ಕೈಗೊಳ್ಳಲಾಗಿರುತ್ತದೆ.

ಮೇಲೆ ತಿಳಿಸಿರುವಂತೆ ಸಿದ್ಧಪಡಿಸಲಾಗಿರುವ ಜಿಯೋರೆಫರೆನ್ಸ್ಡ್ ಮತ್ತು ಗಣಕೀಕೃತ ಅರಣ್ಯ ಗಡಿಗಳನ್ನು ಕ್ಷೇತ್ರದಲ್ಲಿ ಪರಿಶೀಲಿಸುವ (Ground Verification) ಕಾರ್ಯವನ್ನು ಕೈಗೊಳ್ಳಬೇಕಾಗಿದ್ದು, ಸದರಿ ಕಾರ್ಯವನ್ನು ಡಿಸೆಂಬರ್- 2024 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆ.

ಈ ಕಾರ್ಯಕ್ಕಾಗಿ, "ಅರಣ್ಯ ಭೂಮಿ" ಮೊಬೈಲ್ ತಂತ್ರಾಂಶ (Aranya Bhoomi Android Application) ಮತ್ತು GSFIS (Geo-spatial Forest Information System) ಅಂತರ್ಜಾಲ ಪೋರ್ಟಲ್ ಅನ್ನು ಬಳಸಿಕೊಂಡು ಅರಣ್ಯ ಪ್ರದೇಶವಾರು ಅರಣ್ಯ ಗಡಿಗಳನ್ನು ಕ್ಷೇತ್ರದಲ್ಲಿ ಪರಿಶೀಲಿಸುವ ಕಾರ್ಯವನ್ನು ಕೈಗೊಳ್ಳಬೇಕಾಗಿರುತ್ತದೆ. ಸದರಿ ಕಾರ್ಯವನ್ನು ನೆರವೇರಿಸಲು ಐ ಸಿ ಟಿ ಕೇಂದ್ರದ ಜಿ ಐ ಎಸ್ ಘಟಕದಿಂದ ತಾಂತ್ರಿಕ ಸಹಕಾರ, ಕಾರ್ಯವಿಧಾನ ಮತ್ತು ತರಬೇತಿಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ (Google meet ID: fcp-bvtk-ueg) ಒದಗಿಸಲಾಗುತ್ತದೆ.

ಆದ್ದರಿಂದ, ಈ ಕೆಳಗಿನಂತೆ ಕಾರ್ಯ ನಿರ್ವಹಿಸಲು ತಿಳಿಸಿದೆ.

ಕಾರ್ಯವ್ಯಾಪ್ತಿಯ ಉಪ ವಲಯ ಅರಣ್ಯ ಅಧಿಕಾರಿ ಹಾಗೂ ಮೋಜಿಣಿದಾರರು ತಮ್ಮ ಅಧೀನ ಗಸ್ತು ವನಪಾಲಕರ ಮುಖಾಂತರ ಕ್ಷೇತ್ರದಲ್ಲಿನ ಅರಣ್ಯ ಗಡಿಬಿಂದುಗಳ ಪರಿಶೀಲನೆ ಮತ್ತು ಸಂಗ್ರಹಣೆಯನ್ನು ನಡೆಸುವುದು.

ಕಾರ್ಯವ್ಯಾಪ್ತಿಯ ವಲಯ ಅರಣ್ಯ ಅಧಿಕಾರಿಗಳು ಮೇಲುಸ್ತುವಾರಿ, ಮೇಲ್ವಿಚಾರಣೆ, ಪ್ರಗತಿ ಸಾಧನೆ, ಮಾರ್ಗದರ್ಶನ ಮತ್ತು ಪರಿಶೀಲನಾ ಕಾರ್ಯವನ್ನು ಮುನ್ನಡೆಸುವುದು.

ಪರಿಶೀಲನೆ ವೇಳೆಯಲ್ಲಿ ಕಂಡುಬರುವಂತಹ ಲೋಪದೋಷಗಳಿಗೆ ಮತ್ತು ಬಿಟ್ಟುಹೋಗಿರುವ ಅರಣ್ಯಗಡಿಗಳಿಗೆ ಸಂಬಂಧಿಸಿದಂತೆ, ಕಾರ್ಯವ್ಯಾಪ್ತಿಯ ಕಾರ್ಯಯೋಜನೆ ಘಟಕದ ಅಧಿಕಾರಿಗಳು ಹಾಗೂ ವಿಭಾಗಾಧಿಕಾರಿಗಳು ಅರಣ್ಯ ಪ್ರದೇಶಗಳ ಅಧಿಸೂಚನೆಯಂತೆ ಗ್ರಾಮ ನಕ್ಷೆಗಳಲ್ಲಿ ಅರಣ್ಯ ಗಡಿ ಗುರುತಿಸಿ ಸಿದ್ಧಪಡಿಸಿ ನಕ್ಷೆಗಳನ್ನು ಐ ಸಿ ಟಿ ಘಟಕಕ್ಕೆ ಒದಗಿಸುವುದು.

ಜಿಯೋರೆಫರೆನ್ಸ್ ಮತ್ತು ಗಣಕೀಕೃತ ಅರಣ್ಯ ಗಡಿಗಳನ್ನು ಕ್ಷೇತ್ರದಲ್ಲಿ ಪರಿಶೀಲಿಸುವ (Ground Verification) ಕಾರ್ಯವನ್ನು ನೆರವೇರಿಸಲು ಅನುಸರಿಸಬೇಕಾದ ಕಾರ್ಯವಿಧಾನ (SOP) ವನ್ನು ಐ ಸಿ ಟಿ ಘಟಕವು ಸಿದ್ಧಪಡಿಸುವುದು ಹಾಗೂ ಅರಣ್ಯವಾರು, ದಿನಾಂಕವಾರು ಮತ್ತು ಕಾರ್ಯವ್ಯಾಪ್ತಿವಾರು ಪ್ರಗತಿ ವರದಿಗಳನ್ನು GSFIS ಅಂತರ್ಜಾಲ ಪೋರ್ಟಲ್ ನಲ್ಲಿ ರಚಿಸಿ ಎಲ್ಲಾ ಅಧಿಕಾರಿಗಳಿಗೆ ಲಭ್ಯವಾಗುವಂತೆ ಮಾಡುವುದು.

ಅರಣ್ಯ ಗಡಿಗಳನ್ನು ಕ್ಷೇತ್ರದಲ್ಲಿ ಪರಿಶೀಲಿಸಿ ಅರಣ್ಯ ಭೂಮಿ ಅಪ್ಲಿಕೇಶನ್ ಮೂಲಕ ಸ್ವೀಕರಿಸಲಾದ ಮಾಹಿತಿಯ ಆಧಾರದ ಮೇರೆಗೆ ರಾಜ್ಯಮಟ್ಟದಲ್ಲಿ ಕೈಗೊಳ್ಳಲಾದ ಪ್ರಗತಿಯನ್ನು ಕಾಲಕಾಲಕ್ಕೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ, ತರಬೇತಿ ಹಾಗೂ ಹವಾಮಾನ ಬದಲಾವಣೆ) ರವರ ಅಧ್ಯಕ್ಷತೆಯಲ್ಲಿ ಮೇಲ್ವಿಚಾರಣೆ ಮಾಡಲಾಗುವುದು.

ಅರಣ್ಯ ಭೂ-ಪ್ರದೇಶಗಳ ನಿರ್ವಹಣೆಯಲ್ಲಿ ಈ ಕಾರ್ಯವು ತುಂಬಾ ಉಪಯುಕ್ತವಾಗಿರುವುದರಿಂದ ಇದನ್ನು ತುರ್ತಾಗಿ ಮತ್ತು ಪ್ರಾಮಾಣಿಕವಾಗಿ ಎಚ್ಚರಿಕೆಯಿಂದ ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ಪ್ರಾದೇಶಿಕ/ಕಾರ್ಯಯೋಜನೆಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ತಮ್ಮ ಎಲ್ಲಾ ಅಧೀನ ಸಿಬ್ಬಂದಿಗಳಿಗೆ ಸೂಕ್ತ ಆದೇಶವನ್ನು ನೀಡಿ, ಈ ಪ್ರಕ್ರಿಯೆಯ ಪ್ರಗತಿಯನ್ನು ನಿಗಾವಹಿಸಿ ನಿರ್ವಹಿಸಲು ತಿಳಿಸಲಾಗಿದೆ.

Signed by
Brijesh Kumar Dikshit
Date: 07-11-2024 15:55:51
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು

ಪ್ರತಿಯನ್ನು:-
ಎಲ್ಲಾ ವೃತ್ತ, ಹಾಗೂ ವಿಭಾಗ ಅಧಿಕಾರಿಗಳಿಗೆ.